**SEPTEMBER 19, 2025**

**AKASHAVANI - DHARWAD**

**PRADESH SAAMACHARA (KANNADA) 12 PM**

<><><>

ರಾಜ್ಯದ 90 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿಜಾರಿಗೊಂಡ, ಫಿಟ್ಟರ್ ಮತ್ತು ಇಲೆಕ್ಟ್ರೀಷಿಯನ್ ವೃತ್ತಿ ತರಬೇತಿಗೆ ಅಗತ್ಯವಿರುವ, ಉಪಕರಣಗಳನ್ನು, 50 ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ ಖರೀದಿಸಿ, ಒದಗಿಸಲು ಸಚಿವ ಸಂಪುಟ ತೀರ್ಮಾನಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ, ಬೆಂಗಳೂರಿನಲ್ಲಿ ಸಚಿವ ಸಂಪುಟ ಸಭೆ ನಡೆಯಿತು.

<><><>

ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಚಲನಚಿತ್ರ, "ಚಲೋ ಜೀತೇ ಹೈ", ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಬಾಲ್ಯದ ಕುರಿತ, ಸ್ವಾಮಿ ವಿವೇಕಾನಂದರ ಧ್ಯೇಯವನ್ನಾಧರಿಸಿ, 2018 ರಲ್ಲಿ ತೆರೆಕಂಡ ಚಿತ್ರವನ್ನು, ಅಕ್ಟೋಬರ್ 2, ಗಾಂಧಿ ಜಯಂತಿ ವರೆಗೆ, ರಾಜ್ಯಾದ್ಯಂತ 45 ಚಿತ್ರಮಂದಿರಗಳಲ್ಲಿ, ಮರು ಪ್ರದರ್ಶಿಸಲಾಗುತ್ತಿದೆ. ರಾಜ್ಯಾದ್ಯಂತ ಒಟ್ಟು 315 ಪ್ರದರ್ಶನಗಳು, ಆಯೋಜಿತವಾಗಿವೆ. ಧಾರವಾಡದ ಐನಾಕ್ಸ್ ಮಾಲ್‌ನಲ್ಲಿ ಪ್ರತಿ ದಿನ ಸಂಜೆ, 6.15ಕ್ಕೆ ಚಲನಚಿತ್ರ ಪ್ರದರ್ಶನಗೊಳ್ಳಲಿದೆ. ದಕ್ಷಿಣಕನ್ನಡ ಜಿಲ್ಲೆ, ಮಂಗಳೂರಿನ, ಪಾಂಡೇಶ್ವರದ, ಫಾರಂ ಫಿಜ್ಜಾ ಮಾಲ್ ಪಿ.ವಿ.ಆರ್. ಚಿತ್ರಮಂದಿರದಲ್ಲಿ, ಸಂಜೆ 6.20 ಕ್ಕೆ ಚಿತ್ರ ಪ್ರದರ್ಶನವಾಗಲಿದೆ. ಸೇವಾ ಪರ್ವದ ಅಂಗವಾಗಿ 'ಚಲೋ ಜೀತೆ ಹೈನ್' ಕಿರು ಚಿತ್ರವನ್ನು ನಿನ್ನೆ ಬೆಳಗಾವಿಯ ಐನಾಕ್ಸ್ ನ ಚಂದನ ಚಿತ್ರ ಮಂದಿರದಲ್ಲಿ ಸಂಜೆ ಪ್ರದರ್ಶಿಸಲಾಯಿತು.ಕಿರುಚಿತ್ರದ ಪ್ರದರ್ಶನದ ಮೊದಲ ದಿನವೇ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಪ್ರದೇಶ ಸಮಾಚಾರದೊಂದಿಗೆ ತಮ್ಮ ಅನುಭವ ಹಂಚಿಕೊಂಡ ಕವಿತಾ ಹಿರೇಮಠ, ಚಿತ್ರ ಪ್ರೇರಣಾದಾಯಕವಾಗಿದ್ದು, ಮಕ್ಕಳು ತಪ್ಪದೇ ವೀಕ್ಷಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

ಧ್ವನಿ– ಕವಿತಾ ಹಿರೇಮಠ (54 ಸೆಕೆಂದುಗಳು)

<><><>

ಸ್ವಚ್ಛತಾ ಹಿ ಸೇವಾ' ಪಾಕ್ಷಿಕ ದ ಅಂಗವಾಗಿ, ಆಕಾಶವಾಣಿ ಧಾರವಾಡ ಕೇಂದ್ರದಲ್ಲಿ ನಿನ್ನೆ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿತ್ತು. ಏಕ ಪೆಡ್ ಮಾ ಕೆ ನಾಮ ಅಡಿಯಲ್ಲಿ ಸಸಿ ನೆಡುವ ಕಾರ್ಯಕ್ರಮದಲ್ಲಿ ನಿವೃತ್ತ ವಲಯ ಅರಣ್ಯ ಸಂರಕ್ಷಣಾಧಿಕಾರಿ ಎಸ್.ಎನ್.ಕುಲಕರ್ಣಿ ಹಾಗೂ ವಸುಂದರಾ ಫೌಂಡೇಶನ್ ನ – ಮೇಘರಾಜ ಅತಿಥಿಗಳಾಗಿ ಆಗಮಿಸಿದ್ದು, ನಿಲಯದ ಮುಖ್ಯಸ್ಥ ಕೆ. ಅರುಣ್ ಪ್ರಭಾಕರ್, ಕಾರ್ಯಕ್ರಮ ಮುಖ್ಯಸ್ಥ ಶರಣಬಸವ ಚೋಳಿನ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

<><><>

ರಾಜ್ಯದಲ್ಲಿ, ಬಿಜೆಪಿ ಸಂಘಟನೆಗೆ ಒತ್ತು ನೀಡಲು, ಆಯೋಜಿಸಿದ್ದ ರಾಜಕೀಯ ಚಿಂತನ ಶಿಬಿರಕ್ಕೆ, ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ, ಬೆಂಗಳೂರಿನಲ್ಲಿ ಚಾಲನೆ ನೀಡಿದರು. ಎಕ್ಸ್ ಮಾಧ್ಯಮದಲ್ಲಿ ಸಭೆಯ ಮಾಹಿತಿ ನೀಡಿರುವ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ ನೇತೃತ್ವದ, ಉನ್ನತ ಮಟ್ಟದ ಸಮಿತಿ, ದೇಶದಲ್ಲಿ ಏಕಕಾಲಕ್ಕೆ, ವಿಧಾನಸಭೆ ಮತ್ತು ಲೋಕಸಭೆ ಚುನಾವಣೆ ನಡೆಸುವಂತೆ, ಶಿಫಾರಸು ಮಾಡಿದೆ. ಈ ಬಗ್ಗೆ ಸುದೀರ್ಘ ಚರ್ಚೆ ನಡೆಯಿತು ಎಂದಿದ್ದಾರೆ. ಬಿಜೆಪಿಯ ಅನೇಕ ಹಿರಿಯ ಮುಖಂಡರು ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ.

<><><>

ಅಜೀಂ ಪ್ರೇಂಜಿ ಫೌಂಡೇಶನ್ ಸಹಭಾಗಿತ್ವದಲ್ಲಿ, ಉನ್ನತ ಶಿಕ್ಷಣ ಇಲಾಖೆ ರೂಪಿಸಿದ, "ದೀಪಿಕಾ" ವಿದ್ಯಾರ್ಥಿ ವೇತನ ಪ್ರದಾನ ಕಾರ್ಯಕ್ರಮ, ಇಂದು ಸಂಜೆ ನಾಲ್ಕು ಗಂಟೆಗೆ, ಬೆಂಗಳೂರಿನ, ಗಾಂಧಿ ಕೃಷಿ ವಿಜ್ಞಾನ ಕೇಂದ್ರದ, ಬಾಬು ರಾಜೇಂದ್ರ ಪ್ರಸಾದ, ಅಂತಾರಾಷ್ಟ್ರೀಯ ಸಮಾವೇಶ ಭವನದಲ್ಲಿ ಆಯೋಜಿತವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅಜೀಂ ಪ್ರೇಂಜಿ ಪಾಲ್ಗೊಳ್ಳಲಿದ್ದಾರೆ. 37 ಸಾವಿರಕ್ಕೂ ಹೆಚ್ಚು ವಿದಾರ್ಥಿನಿಯರಿಗೆ, ತಲಾ 30 ಸಾವಿರ ರೂಪಾಯಿ "ದೀಪಿಕಾ ವಿದಾರ್ಥಿ ವೇತನ" ನೀಡಲಾಗುತ್ತಿದ್ದು, ಈ ಬಾರಿ 2 ಸಾವಿರ ವಿದ್ಯಾರ್ಥಿನಿಯರು ಅರ್ಹರಾಗಿದ್ದಾರೆ.

<><><>

ಆಲೂಗೆಡ್ಡೆ, ಭವಿಷ್ಯದ ಬೆಳೆಯಾಗಿದ್ದು, ಕೃತಕ ಬುದ್ಧಿಮತ್ತೆ ಹಾಗೂ ಕ್ವಾಂಟಮ್ ತಂತ್ರಜ್ಞಾನ ಸಮ್ಮಿಳಿತ, ರೋಗಮುಕ್ತ ತಳಿ ಅಭಿವೃದ್ಧಿಗೆ, ಒತ್ತು ನೀಡಬೇಕಿದೆ ಎಂದು, ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾದೆಮಿ ಅಧ್ಯಕ್ಷ ರಾಜಾ ಸಾಬ್ ಹೇಳಿದ್ದಾರೆ. ಬೆಂಗಳೂರಿನ ತೋಟಗಾರಿಕೆ ಮಹಾವಿದ್ಯಾಲಯದಲ್ಲಿ, ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ಶಿಮ್ಲಾದ ಕೇಂದ್ರೀಯ ಆಲೂಗೆಡ್ಡೆ ಸಂಶೋಧನಾ ಸಂಸ್ಥೆ ಆಯೋಜಿಸಿದ್ದ, ಅಖಿಲ ಭಾರತ, ಆಲೂಗೆಡ್ಡೆ ಸಮನ್ವಯ ಯೋಜನೆಯ, 43ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ, ಅವರು ಮಾತನಾಡಿದರು. ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದ, ಉಪ ಕುಲಪತಿ, ವಿಷ್ಣುವರ್ಧನ್ ಮಾತನಾಡಿ, ಆಲೂಗೆಡ್ಡೆಯನ್ನು ಹಾಸನ, ಚಿಕ್ಕಮಗಳೂರು, ಧಾರವಾಡ ಮತ್ತು ಬೆಳಗಾವಿಯಲ್ಲಿ ಮುಂಗಾರು ಬೆಳೆಯಾಗಿ ಹಾಗೂ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರಿನಲ್ಲಿ, ಹಿಂಗಾರು ಬೆಳೆಯಾಗಿ ಉತ್ಪಾದಿಸಲಾಗುತ್ತಿದೆ ಎಂದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ.

<><><>